ಪರೀಕ್ಷೆಯಲ್ಲಿ ವೀರಭದ್ರ ನಪಾಸಾಗಿ ಬಿಟ್ಟರು. ಆಗ ಶ್ರೀಗಳು ನೀನು ಉದಯೋನ್ಮುಖ ಸಾಹಿತಿ. ಮುಂದೆ ದೊಡ್ಡ ಸಾಹಿತಿಯಾಗುವವನು. ಸಾಹಿತಿಯಾದವನ ಸಾಹಿತ್ಯಕ್ಕಿಂತ ಅವನ ಬದುಕು ದೊಡ್ಡದಾಗಬೇಕು, ಮತ್ತೊಬ್ಬರಿಗೆ ಮಾರ್ಗದರ್ಶಕವಾಗಿರಬೇಕು ಎಂದು ಬುದ್ಧಿವಾದ ಹೇಳಿದರಂತೆ. ಶ್ರೀಗಳ ಮಾತೇ ವೀರಭದ್ರ ಅವರಿಗೆ ಮಾರ್ಗದರ್ಶಿಯಾಯಿತು. ಅಂತೆಯೇ ಅವರ ಬದುಕೂ ರೂಪಿತವಾಯಿತು, ನಡೆ ನುಡಿಗಳೆಲ್ಲಾ ಸಂತ ಸದೃಶವಾದವು.

ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿಯೇ ಕತೆಗಳನ್ನು ಬರೆಯಲು ಪ್ರಾರಂಭಿಸಿದರೂ ಅವೆಲ್ಲವೂ 'ತೂಕ'ದ ಸಾಹಿತ್ಯದ ಗುಂಪಿಗೆ ಸೇರಿ ಹೋದವು. 1952ರಲ್ಲಿ 'ವಿನೋದ' ಪತ್ರಿಕೆಯ ಮೂಲಕ ಬೆಳಕಿಗೆ ಬಂದ ಅವರು ಮುಂದೆ 50 ವರ್ಷಗಳ ತನಕ ಸತತವಾಗಿ ಬರೆಯುತ್ತಲೇ ಬದುಕಿದರು. ಅವರ ಮೊದಲ ಕತೆ ಪ್ರಕಟವಾಗಿದ್ದು 1956ರಲ್ಲಿ. ಇಲ್ಲಿಯ ತನಕ ಅವರು ಬರೆದ ಕತೆಗಳ ಸಂಖ್ಯೆ ಸುಮಾರು 60. 'ಪ್ರಜಾವಾಣಿ' ಪತ್ರಿಕೆಯೊಂದರಲ್ಲಿಯೇ ಸುಮಾರು 25 ಕತೆಗಳು ಪ್ರಕಟವಾಗಿವೆ. 1971ರಲ್ಲಿ ಇವರ 'ಮರೆಯವರು', 1981ರಲ್ಲಿ 'ವ್ಯವಸ್ಥೆ'– ಈ ಎರಡೂ ಕತೆಗಳಿಗೆ 'ಪ್ರಜಾವಾಣಿ' ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿದೆ.

ವೀರಭದ್ರ ಎಂದೂ ಕತೆಗಳ ಸಂಖ್ಯೆಯ ಬಗ್ಗೆ ತಲೆ ಕೆಡಿಸಿಕೊಂಡವರಲ್ಲ. ಒಂದು ವಸ್ತು ಅವರೊಳಗೆ ನುಸುಳಿದರೆ ಸಾಕು, ಅದರ ಚಿಂತನ ಮಂಥನದಲ್ಲಿಯೇ ತಿಂಗಳುಗಳು ಕಳೆದದ್ದೂ, ವರ್ಷಗಳೂ ಕಳೆದದ್ದೂ ಇದೆ. ಆದ್ದರಿಂದಲೇ ಅವರ ಒಂದೊಂದು ಕತೆಯೂ ಸಮಾಜದ, ಹೆಣ್ಣು–ಗಂಡುಗಳ ಮನಸ್ಸಿನ ತಲ್ಲಣಗಳನ್ನು ಬಹು ಸಮರ್ಥವಾಗಿ ಅನಾವರಣಗೊಳಿಸುತ್ತವೆ. ನವೋದಯ, ನವ್ಯ, ದಲಿತ ಬಂಡಾಯ ಚಳವಳಿಗಳ ಜೊತೆಯೇ ಇವರು ಬೆಳೆದು ಬಂದಿದ್ದರೂ, ಇವರ ಓರಗೆಯವರು ಆಯಾ ಚಳವಳಿಗಳ ಆಶಯಕ್ಕೆ ಅಕ್ಷರ ರೂಪ ಕೊಡುತ್ತಾ ಬಂದರೂ, ವೀರಭದ್ರ ಪ್ರಜ್ಞಾಪೂರ್ವಕವಾಗಿ ಅವುಗಳ 'ಸುಳಿಗಳಿಗೆ' ಸಿಕ್ಕಿದವರೇ ಅಲ್ಲ. ಹಾಗೆಂದಾಕ್ಷಣ ಇವರು ಹೊಸ ಹೊಸ ಹಾದಿಗಳನ್ನು ತುಳಿದಿಲ್ಲ ಎಂದು ಅರ್ಥವಲ್ಲ. ಉದಾಹರಣೆಗೆ ಇವರ 'ಅಸಂಗತಿ', 'ನಾನು ಮತ್ತು ನಾನು ಮತ್ತೂ', 'ಬೇಲಿಗೆ ಸಿಕ್ಕ ಬಯಲು' ಕತೆಗಳಲ್ಲಿ 'ಕಾಮ' ಸಂಬಂಧಿಯಾಗಿ ಇವರು ನಡೆಸುವ ಅನ್ವೇಷಣೆ ಕನ್ನಡದ ಪರಿಸರಕ್ಕೆ ಹೊಸ ಸೇರ್ಪಡೆಯೇ ಆಗಿವೆ. ಹೀಗಾಗಿ ವೀರಭದ್ರ ಅವರದು ಕನ್ನಡ ಕಥಾ ಪರಂಪರೆಯಲ್ಲಿ ವಿಶಿಷ್ಟ ದನಿಯಾಗಿ ಕೇಳಿಸುತ್ತದೆ.

## ಮಲೆಯೂರು ಗುರುಸ್ವಾಮಿ

ಲೇಖಕರು ಚಾಮರಾಜನಗರ ಮಲೆಯೂರು ಗ್ರಾಮದವರು. ಚಾಮರಾಜನಗರದಲ್ಲಿ ತಮ್ಮ ಆರಂಭಿಕ ಶಿಕ್ಷಣ ಪಡೆದು, ಮೈಸೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿದ್ದಾರೆ. 'ಮಹಾಯಾತ್ರಿಕ', 'ಅಪ್ರತಿಮವೀರ', 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಅವರ ಕಾದಂಬರಿಗಳು. 'ಮಾತೆಂಬುದು ಜ್ಯೋತಿರ್ಲಿಂಗ ವಚನ ಸಾಹಿತ್ಯ', 'ಶ್ರೀ ಕಾರ್ಯಸ್ವಾಮಿ ಮಠದ ಕ್ಷೇತ್ರ ಚರಿತ್ರೆ', 'ಶರಣ ಕಿರಣ ವ್ಯಕ್ತಿ ಚಿತ್ರ', 'ಪ್ರಭುಲಿಂಗ ಲೀಲೆ', 'ಮೂಡಲ ಸೀಮೆಯ ಕತೆಗಳು', 'ಕಾಡಂಚಿನ ಕೋಗಿಲೆಗಳ ಕಲರವ', 'ಕಪಿಲಾ ನದಿಯ ಎಡಬಲದಿ' ಸೇರಿದಂತೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ವಿದುಷಿ ಬೆಂಗಳೂರು ನಾಗರತ್ನಮ್ಮ ಅವರ ಬದುಕನ್ನು ಆಧರಿಸಿದ 'ಕಪಿಲೆ ಹರಿದಳು ಕಡಲಿಗೆ' ಎನ್ನುವ ಕಾದಂಬರಿಯನ್ನು ಹೊರತಂದಿದ್ದಾರೆ.